INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -2, March-April, 2023,
PageNo,24- 30
Peer -Reviewed, Refereed Journal

# ಜನಪದರಲ್ಲಿ ಬಂಧ-ಸಂಬಂಧಗಳ ಮಾಧುರ್ಯ

ರಂಗನಾಥ ಟಿ. ಎನ್.[1]

ಜಗತ್ತಿನ ಇನ್ಯಾವುದೇ ದೇಶಗಳಲ್ಲೂ ಕಂಡುಬರದ ಸಂಬಂಧಗಳು ಮತ್ತು ಅವುಗಳಿಗೆ ನೀಡುವ ಸ್ಥಾನಮಾನ ನಮ್ಮ ದೇಶದ ಉದ್ದಗಲಕ್ಕೂ ಹಾಸು ಹೊಕ್ಕಾಗಿದೆ. ನಮ್ಮಲ್ಲಿರುವ ಸಂಬಂಧಗಳ ಉಪನಾಮಗಳು ಎಷ್ಟು ಸೋಜಿಗವೆಂದರೆಅವು ಬೇರೆ ಇನ್ನೆಲ್ಲೂ ಕಂಡು ಬರುವುದಿಲ್ಲ ಎಂಬುದು ಪ್ರಶಂಸನೀಯ. ಮತ್ತು ಭಾರತೀಯನಾಗಿ ಅದು ನನಗೆ ಒಂದು ಬಗೆಯ ಹೆಮ್ಮೆಯ ಸಂಗತಿ. ಸಂಬಂಧಗಳು ಕೇವಲ ಮನುಷ್ಯರಲ್ಲಿ ಮಾತ್ರವಲ್ಲ ಇಡೀ ಪ್ರಾಣಿಸಂಕುಲದಲ್ಲೇ ಇದೆ. ಅವುಗಳಲ್ಲೂ ಕುಟುಂಬ, ತಾಯಿ, ಮಕ್ಕಳೆಂಬ ವಾತ್ಸಲ್ಯಗಳನ್ನು ಕಾಣಬಹುದು. ಈ ಸಂಕೋಲೆಯುಆರಂಭದಿಂದಲೇಪ್ರಾಣಿ ಸಂಕುಲದಲ್ಲಿ ಸೃಷ್ಟಿಗೊಂಡುಪರಂಪರಾನುಗತವಾಗಿ ಸಾಗಿಕೊಂಡು ಬಂದಿವೆ. ಆದರೆ ಇತ್ತೀಚಿನ ದಿನಗಳಲ್ಲಿಸಂಬಂಧಗಳ ನಡುವಿನ ಪರಸ್ಪರ ಒಲವು ಕ್ಷೀಣಿಸುತ್ತಾ ಬಂದಿದೆ. ಕಾರಣ ಇಂತದ್ದೇ ಎಂದು ಹೇಳಲು ಕಷ್ಟವಾದರು ಆಧುನೀಕರಣ ಅಥವಾ ಮಾನವನ ಅತಿಯಾದ ಸ್ವಾರ್ಥ ಬುದ್ಧಿ ಇರಬಹುದು ಎಂಬುದು ಮುಸುಕಿನ ಮೋಡದಿಂದ ಬೆಳಕು ಕಂಡಂತೆ ಗೋಚರಿಸುತ್ತದೆ.ಸಾವಿರಾರು ವರ್ಷಗಳಿಂದ ನಮ್ಮ ನಡುವೆ ಉಳಿಸಿ-ಬೆಳೆಸಿಕೊಂಡು ಬಂದಿದ್ದ ಬಂಧ ಸಂಬಂಧಗಳು, ಪ್ರೀತಿ ವಿಶ್ವಾಸಗಳು ಇಂದು ಗೌಣವಾಗಿವೆ. ಈ ಸ್ಥಿತಿ ತಲುಪಿರುವುದು ದುರಂತವೆ ಸರಿ. “ಸಂಬಂಜಅನ್ನೋದು ದೊಡ್ಡದು ಕನಾ” ಇದು ಬರಹಗಾರ ದೇವನೂರು ಮಹಾದೇವ ಅವರ ಹೇಳಿಕೆಯಷ್ಟೇ ಅಲ್ಲಾ, ಸಾವಿರಾರೂ ವರ್ಷಗಳಿಂದ ಒಬ್ಬರನ್ನೊಬ್ಬರು ಗೌರವಿಸಿ, ಪ್ರೀತಿಸಿ, ಆದರಿಸುವ ಗುಣಗಳನ್ನು ಮೈಗೂಡಿಸಿಕೊಂಡಿದ್ದ ಜನಪದರ ಬದುಕಿಗೆ ಹಿಡಿದ ಕನ್ನಡಿಯಂತಿರುವ ನಾಣ್ಣುಡಿ. ಇಡೀ ಬದುಕಿನಲ್ಲಿ ಸಂಬಂಧಗಳೆ ಎಲ್ಲದುಕ್ಕಿಂತ ದೊಡ್ಡದೆಂದು ತಿಳಿದು ಬದುಕಿದವರು ಜನಪದರು. ಸಂಬಂಧ ಎಂಬುದರಲ್ಲಿ ಬಂಧ ಎಂದರೆ ಬಂಧನ, ಕೂಡಿಸಿದುದು ಎಂದು ಸಂಬಂಧ ಎಂಬುದು ಒಂದರೊಂದಿಗೆ ಮತ್ತೊಂದನ್ನು ಕೂಡಿಸು, ಸಂಪರ್ಕಿಸು, ಜೋಡಿಸು, ಸಂಯೋಗ, ಹೊಂದಾಣಿಕೆ ಹೀಗೆ ಇನ್ನು ಹಲವಾರು ಅರ್ಥಗಳಿಂದ ಕೂಡಿದೆ. ಒಟ್ಟಿನಲ್ಲಿ ಮಾನವ ಎಂದು ಒಂದೆಡೆ ನೆಲೆ ನಿಂತು ತನ್ನ ಸಂಗಾತಿ

[1]. ಜಾನಪದ ಸಂಶೋಧನ ವಿದ್ಯಾರ್ಥಿ, ಮೈಸೂರು ವಿಶ್ವವಿದ್ಯಾನಿಲಯ,ಮಾನಸಗಂಗೋತ್ರಿ,ಮೈಸೂರು.

ಮಕ್ಕಳೊಂದಿಗೆ ಜೀವಿಸಲು ಮುಂದಾದನೋ ಅಂದಿನಿಂದಲೇ ಈ ಸಂಬಂಧವೆಂಬ ವ್ಯಾಮೋಹ ಸೃಷ್ಟಿಗೊಂಡಿರಬಹುದು.

ಇದರ ಪ್ರಭಾವ ಭೂಮಿಯಲ್ಲಿ ಸೃಷ್ಟಿಗೊಂಡ ಸಕಲ ಜೀವಿಗಳು, ತನ್ನ ಪರಿವಾರದೊಂದಿಗೆ ಸಂಬಂಧವೆಂಬ ಸಂಕೋಲೆಯಲ್ಲಿ ಸುತ್ತುವರೆದುಬದುಕುತ್ತವೆ. ಒಂದು ಜೀವ ಮತ್ತೊಂದು ಜೀವದೊಂದಿಗೆ ನಡೆದುಕೊಳ್ಳುವ ರೀತಿ ನೀತಿಗಳು,ಭಾಂದವ್ಯಗಳು, ಅವರು ನಡೆದುಕೊಳ್ಳುವ ಪದ್ಧತಿಗಳು ರಚನೆಗೊಂಡವು. ಅವುಗಳನ್ನೇ ನಮ್ಮ ಜನಪದರುಗೌರವದಿಂದ ತಮ್ಮ ಬದುಕಿನಲ್ಲಿ ಪಾಲಿಸಿಕೊಂಡು ಬಂದಿದ್ದಾರೆ. ಪರಸ್ಪರ ಸಂಬಂಧಗಳಿಂದ ಗೌರವ ಮತ್ತು ಪ್ರೀತಿ ಸಂರಚನೆಗೊಂಡವು. ಅವ್ವ–ಅಪ್ಪ, ತಾಯಿ–ಮಗು, ತಂದೆ–ಮಗಳು, ಗಂಡ–ಹೆಂಡತಿ, ಅಣ್ಣ–ತಂಗಿ, ಅಕ್ಕ–ತಮ್ಮ, ಅಜ್ಜಿ–ತಾತಾ, ಮುತ್ತಜ್ಜಿ, ಮಗ, ಮೊಮ್ಮಗ, ಹಿರಿಮಗ, ಕಿರಿಮಗ, ಮರಿಮಗ, ಮೂಳಮಗ, ದೊಡ್ಡವ್ವ, ಚಿಕ್ಕವ್ವ, ದೊಡ್ಡಪ್ಪ, ಚಿಕ್ಕಪ್ಪ ಅತ್ತೆ–ಮಾವ, ಸೋದರತ್ತೆ,ಸೋದರಮಾವ, ಚಿಕ್ಕಪ್ಪ–ಚಿಕ್ಕಮ್ಮ, ಬಾವ–ಬಾಮೈದ, ಗೆಳೆಯ–ಗೆಳತಿ ಹೀಗೆ ಮುಂದುವರೆಯುತ್ತ ಸಂಬಂಧಗಳ ಸರಪಳಿಯೆ ಏಣೆದುಕೊಂಡು ಹೋಗುತ್ತದೆ. ಈ ದೇಶದಲ್ಲಿ ಸಂಬಂಧಗಳು ಏಳುಸುತ್ತಿನ ಕೋಟೆಯಂತೆ ಜನಪದರ ಬದುಕನ್ನು ಸುತ್ತುವರೆದಿದೆ. ಬಡವ–ಶ್ರೀಮಂತ, ರಾಜ– ಸಾಮಾನ್ಯ, ಮೇಲು ಕೀಳು ಎಂಬ ಬೇಧ ಭಾವವಿಲ್ಲದೆ ಅವರವರ ಬದುಕಿನ ಸಮುದಾಯಗಳ ನಡುವೆ,ಕುಟುಂಬ ಮತ್ತು ಸಮಾಜದ ಸಮ ಮನಸ್ಕರ ನಡುವೆ ಮತ್ತು ರಕ್ತ ಸಂಬಂಧಿಕರ ನಡುವೆ ಈ ಸಂಬಂಧ ಎಂಬುದು ಅಸಾದೃಷ್ಯ ಸೇತುವೆ ಬೆಸೆದುಕೊಂಡ್ತಿದೆ. ಹೀಗೆ ಸಮೃದ್ಧವಾದ ಸಂಬಂಧಗಳಿಂದು ಮರೀಚಿಕೆಯಂತೆ ಅಪರೂಪಕ್ಕೆಕಾಣುತ್ತಿರುವುದು ದೌರ್ಭಾಗ್ಯವೆ ಸರಿ. ಆದರೆ ಇದೇ ಸಂಬಂಧಗಳಿಗೆ ನಮ್ಮ ಪೂರ್ವಿಕರಲ್ಲಿ ಅಂದರೆ ಜನಪದರಲ್ಲಿ ದೈವದ ಸ್ಥಾನವಿತ್ತು. ಸಂಬಂಧ ಒಂದು ಏರ್ಪಟ್ಟರೆ ಅದನ್ನು ತಮ್ಮ ಜೀವಮಾನದುದ್ದಕ್ಕೂ ಗೌರವದಿಂದ ಕಾಯ್ದುಕೊಳ್ಳುತ್ತಿದ್ದರು.

ಗತಕಾಲದಿಂದ ಹಿಡಿದು ಆಧುನಿಕತೆವೈಭವಯುತ ಬದುಕಿನಲ್ಲೂ, ಜನಪದರಲ್ಲಿ ಬಾಂಧವ್ಯದ ಮಾಧುರ್ಯ ಅಚ್ಚಳಿಯದೇ ಸಾಗುತ್ತಿದೆ. ತನ್ನದೇ ಆದ ನಡೆ, ನುಡಿ, ಭಾವಗಳನ್ನು ಅಭಿವ್ಯಕ್ತಿಗೊಳಿಸುತ್ತ, ಹೃದಯವಂತಿಕೆಯ ಆಳದಿಂದ ಸಾಕಾರಗೊಳ್ಳುತ್ತಾ ಬಂದಿದ್ದಾರೆ. ಬಂಧುತ್ವವು ಪರಸ್ಪರ ವಿಚಾರ ವಿನಿಮಯಗಳಿಗಷ್ಟೇ ಸೀಮಿತವಾಗಿರದೆ ಪಂಚೇಂದ್ರಿಯಗಳಲ್ಲೂ ಸಂಭಾಷಣೆನಡೆಸುವ ಶಕ್ತಿ ಸಂಬಂಧಗಳೀಗಿವೆ. ಪ್ರಸ್ತುತ ಸಮಾಜದ ಪರಿಸರ ಮತ್ತು ಪರಿಸ್ಥಿತಿಗಳು ದೊರೆತಿರುವ, ದರ್ಶಿಸುವ ಕಾಲಜ್ಞಾನ ಗ್ರಂಥಗಳಂತೆ, ಜನ ಜೀವನವನ್ನು ನೆಂಟಸ್ತಿಕೆಯಲ್ಲಿ ಬೆಸೆದುಕೊಂಡು ಬೆರೆಯುತ್ತಾ ಬಂದ ಜಾನಪದವು ರಕ್ತ ಸಂಬಂಧಗಳಂತೆ ಗಟ್ಟಿಯಾಗಿ ಬೇರೂರಿದೆ.

ಕಾಲ ಉರುಳಿದಷ್ಟು ಜನಪದರಲ್ಲಿ ಸಂಬಂಧಗಳ ಬಾಂಧವ್ಯ ಹಸನಾಗಿದೆಯೇ ಹೊರತು ಹಳಸಾಗಿಲ್ಲ.ಕಾರಣ ಜನಪದರಿಗೆ ಸಂಬಂಧಗಳ ಮೇಲೆ ಇರುವ ಗೌರವದಿಂದ. ಇವರು ಬದುಕಿನ

ವೈಚಿತ್ರ್ಯ, ರೀತಿ, ನೀತಿ, ಆದರ್ಶ, ಪ್ರೀತಿ–ವೈರಾಗ್ಯ, ಸುಖ–ದುಃಖ, ಜೀವನ–ಮರಣ ಮೊದಲಾದವುಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡು ಕಾಲಕಾಲಕ್ಕೆ ಲೋಕದ ಬದಲಾವಣೆ ಸಂದರ್ಭದಲ್ಲಿ ಧಾರೆ ಎರೆದಿದ್ದಾರೆ. ಹೇಳುವವರ, ಕೇಳುವವರ, ಆಚರಿಸುವವರ ಸೃದಯಗಳಲ್ಲಿ ಭಾಂದವ್ಯ ಮನೆ ಮಾಡಿದೆ. ಹಾಗಾಗಿಯೇ ಜಾನಪದರಲ್ಲಿ ಬಂಧ ಮಾಧುರ್ಯವು ಜ್ವಲಂತವಾಗಿ ಪ್ರತಿಬಿಂಬಿಸುತ್ತಿದೆ. ಈ ಬಂಧ–ಸಂಬಂಧಗಳನ್ನು ಜನಪದರು ನಿತ್ಯದ ಬದುಕಿನ ಭಾಗವೆಂಬಂತೆ ಬದುಕಿದವರು. ಅದನ್ನೆ ಹಾಡುತ್ತಾ–ಗುನುಗುತ್ತಾ ಕಾಲಕಳೆಯುತ್ತಿದ್ದರು. ಅವು ಬಾಯಿಂದ–ಬಾಯಿಗೆ ಹರಿದು ಬರುತ್ತಿದೆ. ಅವುಗಳಲ್ಲಿ ಕೆಲವೊಂದನ್ನ ಈ ಕೆಳಗಿನಂತೆ ಕಾಣಬಹುದು.

ಮದುವೆಯಾದ ಹೆಣ್ಣು ತನ್ನ ತವರಿನ ನೆನಪಿನಲ್ಲಿ ಪರಿತಪಿಸುವ ಅಂತಃಕರಣವನ್ನು ಬಿಚ್ಚಿಡುವ ಸಾಲುಗಳನ್ನು ಎಷ್ಟು ಬಲಿಷ್ಠವಾಗಿ ಕಟ್ಟಿದ್ದಾರೆ ಎಂದರೆ ಮಮತೆಯಹಾರೈಕೆಯ ನುಡಿಗಳನ್ನು ಮಾತುಗಳಲ್ಲಿ ಕಟ್ಟಿ ಹಾಡಿರುವ ಜನಪದರು ಮಧುರ ಭಾವಗಳ ಗೀತೆಗಳನ್ನು ಬದುಕಿನ ದರ್ಪಣದಂತೆ ಹಿಡಿದಿದ್ದಾರೆ.

**ಹಾಲುಂಡ ತವರೀಗೆ ಏನೆಂದು ಹಾಡಲಿ**
**ಹೊಳೆದಂಡೆಲಿರುವ ಗರಕೀಯ ಕುಡಿಯಂಗ**
**ಹಬ್ಬಲಿ ಅವರ ರಸಬಳ್ಳಿ.**

ಹೊಳೆ ದಂಡೆಯ ಗರಿಕೆ ಆನೀರಿನ ಸೆಲೆಯಿಂದ ಹಸಿರನ್ನು ಒದ್ದುಕೊಂಡು ನಳನಳಿಸುತ್ತಾ, ನಿತ್ಯ ಹರಿದ್ವರ್ಣದಂತೆ ಕಂಗೊಳಿಸುತ್ತಿರುತ್ತವೆ. ಹೀಗೆ ತನ್ನ ತವರೂ ಕೂಡ ಸದಾಕಾಲ ಸಕಲೈಶ್ವರ್ಯದಿಂದ ಕೂಡಿರಲಿ ಎಂದು ಬಯಸುತ್ತಾಳೆ.ತನ್ನ ತವರನ್ನುಪ್ರೀತಿಯಿಂದಹರಸುತ್ತಾ ಬಳ್ಳಿಯಂತೆ ಸಂಮೃದ್ಧ ಬದುಕು ಅವರದ್ದಾಗಲಿ ಎಂದು ಮನದಾಳದ ಭಾವ ಪ್ರತಿ ಹೆಣ್ಣಿನ ಬದುಕಿನಲ್ಲು ಪ್ರಸ್ತುತ. ವಾಸ್ತವದಲ್ಲಿ ಹೆಣ್ಣಾದವಳು ತವರೂರಿನ ಬಗ್ಗೆ ಹೊಂದಿರುವ ಭಾವವನ್ನು ಈ ಕೆಳಗಿನ ಪದ್ಯದಿಂದ ತಿಳಿಯಬಹುದಾಗಿದೆ,

**ತವರೂರ ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ**
**ಸಾಸಿವೆಯಷ್ಟು ಮರಳಿಲ್ಲ ಬಾನಲ್ಲಿ**
**ಬಿಸಿಲೇನ ಬೇಗೆ ಸುಡಲಿಲ್ಲ.**

ಹೆಣ್ಣೊಂದು ಮದುವೆಯ ನಂತರ ಗಂಡನ ಮನೆಯ ದೀಪವಾಗಿ ತವರು ಮನೆಯಿಂದ ತೆರಳುವಳು. ಅಲ್ಲಿಯವರೆಗೂ ತಂದೆ–ತಾಯಿ, ಅಣ್ಣ–ತಮ್ಮ ಎಂಬ ಸಂಬಂಧಗಳೊಂದಿಗೆ ಹೊಂದಿಕೊಂಡಿದ್ದ ಅವಳು, ಗಂಡನ ಮನೆಯಲ್ಲಿ ಗಂಡ–ಮಕ್ಕಳು, ಅತ್ತೆ–ಮಾವ, ನಾದಿನಿ–ಬಾವ ಎಂಬ ಹೊಸ ಸಂಬಂಧಗಳೊಂದಿಗೆ

ಬೆರೆಯುವವಳು. ಆದರೆ ಅವಳ ಮನದಲ್ಲಿ ಸದ ಹಸಿರಾಗಿರುವ ತವರು ಮನೆಯ ದಾರಿ ಬಹು ಸುಂದರವಾಗಿ ಭಾಸವಾಗುತ್ತದೆ. ಅದನ್ನು ತನ್ನ ಕಲ್ಪನಾ ಲೋಕದಲ್ಲೇ ದಾರಿಯನ್ನು ನೆನೆಯುವ ಪರಿಯನ್ನು ಈ ಸಾಲುಗಳು ಹೇಳುತ್ತದೆ.ಕಲ್ಲು ಮುಳ್ಳುಗಳಿಲ್ಲದ, ಬಿಸಿಲಿನ ತಾಪವಿಲ್ಲದ, ತಂಪಾದ ತಾಣದಂತೆ ಎಂದೆನಿಸುತ್ತದೆ. ತವರಿಂದ ದೂರಾದ ಹೆಣ್ಣಿನ ಮಾನಸಿಕ ತೊಳಲಾಟವನ್ನು ತೋರಿಸುವ ಪರಿಯು ಬಂಧನಗಳ ಮಧುರಸವಿಯನ್ನು ಇಮ್ಮಡಿಗೊಳಿಸಿದೆ.

**ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ**

**ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿಯ**

**ಎದ್ದೊಂದು ಘಳಿಗೆ ನೆನೆದೇನ.**

ಹೆಣ್ಣನ್ನು ದೇವರೆಂದು ಆರಾಧಿಸುವ ನಮ್ಮ ನಾಡಿನಲ್ಲಿ ಸಕಲವನ್ನು ತಾಯಿ ಸ್ವರೂಪಿಣಿಯಂತೆ ಕಾಣುವ ಪರಂಪರೆಯಿದೆ. ಅದರಲ್ಲೂ ಸಕಲ ಜೀವರಾಶಿಯನ್ನು ತನ್ನೊಡಲಲ್ಲಿ ಪೋಷಿಸುತ್ತಿರುವ ಭೂಮಿಯನ್ನು ಭಾರತೀಯರು ತಾಯಿಯೆಂದೆ ಸಂಬೋಧಿಸುವುದು ಕೃತಜ್ಞತಪೂರಕವಾಗಿದೆ. ತನ್ನ ಹುಟ್ಟಿನಿಂದ ಸಾವಿನವರೆವಿಗೂ ಭೂ ತಾಯಿಯ ಮಡಿಲಿನಲ್ಲೆ ಬದುಕುವ ಮಾನವ,ಪ್ರತಿ ನಡೆಗಳಲ್ಲೂಭೂ ದೇವಿಯ ನೆನೆದು ಮುನ್ನಡೆವ ಪರಿಪಾಠವಿದೆ. ಅದರಲ್ಲೂ ಜನಪದರು ಮಣ್ಣಿನ ಕಣ ಕಣದಲ್ಲೂ ದೈವವನ್ನೆ ಕಾಣುತ್ತಾರೆ. ಅವರು ಭೂ ತಾಯಿಯನ್ನೇ ನಂಬಿ ಬದುಕುವವರು. ವ್ಯವಸಾಯವೆ ಮೂಲವಾಗಿ ಬಾಳಿದವರು. ಅದ್ದರಿಂದ ಈ ಸಾಲುಗಳು ಅವರ ಅಂತರ್ಯದ ಆಳದಿಂದ ನೈಜವಾಗಿ ಪಸರಿಸಿದಂತಿದೆ.

ಜನಪದರ ದಿನಾರಂಭವು ಸುರ್ಯೋದಯದಿಂದ ಆರಂಭವಾದರು, ಶುಭದಿನದ ಪ್ರಾರಂಭ ಮಾತ್ರ ನಮ್ಮ ಹಸಿವಿಗೆ ಅನ್ನವನ್ನು ಒದಗಿಸಿಕೊಟ್ಟ, ಎಳ್ಳು ಜೀರಿಗೆ ಬೆಳೆದು ಸೌಖ್ಯದ ಬದುಕನ್ನು ದಯಪಾಲಿಸಿದ ಭೂತಾಯಿಯನ್ನು ನೆನೆದು ನಮಸ್ಕರಿಸಿಯೆ. ದಿನದ ಚಟುವಟಿಕೆಗೆ ನಾಂದಿ ಹಾಡುವ ನೀತಿಯುತ ಆಚರಣೆಯನ್ನು, ಭೂತಾಯಿ ಹಾಗೂ ನಮಗೂ ಇರುವ ಬಾಂಧವ್ಯವನ್ನು ತೋರಿಸುತ್ತದೆ.ಮನಸ್ಸಿಗೆ ಮುದ ನೀಡುವ ಮಾಧುರ್ಯದ ಭಾವನೆ ಜಾನಪದ ಗೀತೆಗಳು ಸಾಕ್ಷೀಕರಿಸಿದಂತಿದೆ. ದಾಂಪತ್ಯ ಬಾಂಧವ್ಯದ ಗೀತೆಗಳ ಸಂಬಂಧಿಸಿದಂತೆ ಹೆಚ್ಚು ಅರ್ಥಪೂರ್ಣವಾಗಿ ಶ್ರೀಮಂತಿಕೆಯಿಂದ ಕೂಡಿದೆ. ಹೆಣ್ಣು–ಗಂಡುಗಳ ಸಂಬಂಧವನ್ನು ತೆರೆದಿಟ್ಟಿದೆ. ಸರಸ–ವಿರಸಗಳ ಗೀತೆಯಂತು ಪ್ರತಿಯೊಬ್ಬರಿಗೂ ಆಪ್ತವಾಗಿಸಿ, ಹಾಡಲು ಪ್ರೇರೇಪಿಸುತ್ತವೆ.

**ಅಡಗಿಯ ಮನಿಯಾಗ ಮಡದಿಯ ಸುಳಿವಿಲ್ಲ**

**ಅಡಗಿ ಬಾಯೀಗ ರುಚಿಯಿಲ್ಲ ಹಡೆದವ್ವ**

**ಮಡದಿ ತವರೀಗೆ ಹೋಗ್ಯಾಳ**

ಗಂಡಿಗೆ ಹಡೆದವ್ವ ದೈವವಾದರೆ, ಕೈಹಿಡಿದ ಮಡದಿ ತನ್ನ ಸರ್ವಸ್ವವು ಆಗಿರುತ್ತಾಳೆ. ಯವ್ವನದಲ್ಲಿ ಹೆಂಡತಿಯ ಸಖ್ಯ ಗಂಡಿಗೆ ಬಹು ಮುಖ್ಯ. ಅವನು ಸಕಲಕ್ಕೂ ಮಡದಿಗೆ ಜೋತು ಬೀಳುವಷ್ಟು ಪ್ರೀತಿಯಲ್ಲಿ ಮುಳುಗಿರುತ್ತಾನೆ. ಇಂತಹ ಗಂಡ ಹೆಂಡತಿಯ ನಡುವಿನ ಸಂಬಂಧ ಹೆಂಡತಿ ತವರಿಗೆ ಹೋದಾಗ ಪರಿತಪಿಸುವ ಸನ್ನಿವೇಶ ಈ ಸಾಲಿನಲ್ಲಿವೆ. ತಾಯಿಯ ರುಚಿಯಾದ ಅಡುಗೆ ಕೂಡ ಅರುಚಿಯಂತೆ ಅನಿಸುತ್ತದೆ. ಅಡುಗೆಯ ರುಚಿ ಅದರಲ್ಲಿ ಬಳಸಿದ ಪದಾರ್ಥಗಳಿಗಿಂತ ಬಡಿಸುವವರ, ಉಣ್ಣುವವರ ನಡುವಿನ ಮಧುರ ಸಂಬಂಧದ ಮೇಲೆ ನಿಂತಿರುತ್ತದೆ. ಗಂಡನ ಪ್ರೇಮ, ಹತಾಶೆ, ಅನಾಸಕ್ತಿಗಳು ಅತ್ಯಂತ ಸಹಜವಾಗಿ ಈ ಗೀತೆಯಲ್ಲಿ ಮೂಡಿ ನಿಂತಿದೆ.

**ಕೂಸು ಇದ್ದ ಮನಿಗಿ ಬೀಸಣಿಗೆ ಯಾತಕ**

**ಕೂಸು ಕಂದಮ್ಮ ಒಳ ಹೊರಗ ಆಡಿದರ**

**ಬೀಸಣಿಗೆ ಗಾಳಿ ಸುಳಿದಾವು.**

ಮಗು ಮನೆಯ ತುಂಬ ಅಲ್ಲಿಂದಿಲ್ಲಿಗೆ ಇಲ್ಲಿಂದಿಲ್ಲಿಗೆ ಸುಳಿದಾಡುತ್ತಿದ್ದರೆ ಬೀಸಣಿಗೆಯಿಂದ ಗಾಳಿ ಬೀಸಿದಂತೆ, ಮನೆಯೊಳಗೆಲ್ಲ ಗಾಳಿ ಹರಿದಾಡುತ್ತದೆ. ಜನಪದರು ಮಗುವಿನ ಚರ್ಯೆಯನ್ನು ಎಷ್ಟು ಚೆನ್ನಾಗಿ ರೂಪಿಸಿದ್ದಾರೆ. ಎಂದರೆ ಆಗತಾನೆ ಅಂಬೆಗಾಲಿಡುತ್ತ ತೊದಲು ನುಡಿಗಳಿಂದ ಒಂದೆಡೆಯಿಂದ ಮತ್ತೊಂದೆಡೆಗೆ ಸರಸರನೆ ಓಡಾಡುವ ಮಗು, ಅದರ ಅತಿಯಾದ ಹುಮ್ಮಸ್ಸು ಮನೆಯೊಳಗೆ ಗಾಳಿಯು ಬೇಸಿಗೆಯಲ್ಲು ತಂಪುನೀಡುವಷ್ಟು ಹಿತವಾಗಿದೆ ಎಂದು ಜನಪದರು ಆನಂದಿಸುತ್ತಿರುವುದು ಈ ಸಾಲುಗಳಲ್ಲಿದೆ. ಮಗುವಿನ ಆಟ ವಿನೋದಗಳಿಂದ ಸಿಗುವ ಆನಂದವನ್ನು ಇಲ್ಲಿವ್ಯಕ್ತಪಡಿಸಿದ್ದಾರೆ. ಜನಪದ ಗೀತೆಗಳು ಜನಪದರ ನೋವು ನಲಿವುಗಳನ್ನು ತುಂಬಿಕೊಂಡಂತಿವೆ. ಹೆಣ್ಣಿನ ಮಾನಸಿಕ ಸ್ಥಿತಿಗತಿಗಳನ್ನು ಜನಪದ ಗೀತೆಗಳು ಸೂಕ್ತವಾಗಿ ಎಳೆಎಳೆಯಾಗಿ ಬಿಚ್ಚಿಟ್ಟಿವೆ. ಮನೋವೈಜ್ಞಾನಿಕ ನೆಲೆಯಲ್ಲಿಯೂ ಈ ಗೀತೆಗಳ ಅಧ್ಯಯನಕ್ಕೆ ವಿಶೇಷ ಅವಕಾಶಗಳಿರುವುದನ್ನು ಕಾಣಬಹುದಾಗಿದೆ.

**ಆಡಿ ಬಾ ಎನ ಕಂದ ಅಂಗಾಲ ತೊಳೆದೇನ**

**ತೆಂಗಿನಕಾಯಿತಿಳಿನೀರ ತಕ್ಕೊಂಡು**

**ಬಂಗಾರ ಮೋರೆ ತೊಳೆದೇನ**

ಇಲ್ಲಿ ತಾಯಿ ಮಗುವಿನ ಸಂಬಂಧ ಎಷ್ಟು ಮೃದುಲವಾಗಿದೆ ಎಂದರೆ, ತಾಯಿ ಮಗುವಿಗೆ ಆಟವಾಡುವ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದಾಳೆ, ಮಗು ನೀ ಮಣ್ಣಲ್ಲಿ, ಕೆಸರಲ್ಲಿ ಮನಸೊ ಇಚ್ಚೆ ಕುಣಿದಾಡಿ ಬಾ ನಿನ್ನ ಅಂಗಾಲು ಮತ್ತು ಮೃದುವಾದ ಮುಕವನ್ನು ಎಳೆನೀರು ತಂದು ತೊಳೆಯುತ್ತೇನೆ.ಈ ಸಾಲುಗಳಲ್ಲಿ ತಾಯಿಯ ಬಂಧ ಸಂಬಂಧ ಹೇಗಿದೆ ಎಂದರೆ ಆಟವಾಡಿ ಬಂದ ಮಗುವನ್ನು ಕಂಡ ತಾಯಿಗೆ ಎಲ್ಲಿಲ್ಲದ ಮಮಕಾರ ಹಾಗೂ ಕಾಲು ಎಷ್ಟು ಹೊಲಸುಮಾಡಿಕೊಂಡರೇನು! ಮೊಗವು ಎಷ್ಟು ಮಾಸಿದರೇನು? ಅವಳಿಗೆ ಕಷ್ಟವಿಲ್ಲ, ಚಿಂತೆ–ಕೋಪವಿಲ್ಲ. ತೆಂಗಿನಕಾಯಿಯ ತಿಳಿನೀರ ತೆಗೆದು ಬಂಗಾರದಂತಹ ಮೊಗವನ್ನು ತೊಳೆಯುವೆನು, ಎಂಬುವಲ್ಲಿ ಅವಳ ಪ್ರೀತಿಯ ತಾಯ್ತನದಲ್ಲಿ ಹೆಪ್ಪುಗಟ್ಟಿದೆ. ತಾಯಿಯಾದ ಅವಳು ಬಾಳು ಮಗುವಿನ ಪಾಲನೆ ಪೋಷಣೆಯಿಂದಲೆ ಸಾರ್ಥಕ ಎನಿಸಿದೆ.ಹೀಗೆ ಜನಪದರ ಹೃದಯವಂತಿಕೆ ಮನೆಮಾಡಿದೆ. ಇಲ್ಲಿ ರೀತಿ–ನೀತಿ, ಪ್ರೀತಿ, ಹಾವಾಭಾವ, ಸಂಸ್ಕೃತಿ–ಆಚರಣೆಗಳೆಲ್ಲವೂ ಅಕ್ಷರ ರೂಪದಲ್ಲಿ ಅರಳಿವೆ. ಜನಪದ ಗೀತೆಗಳಲ್ಲಿ ತಾಯಿಯ ಬಗ್ಗೆ, ಮಕ್ಕಳ ಬಗ್ಗೆ, ಭೂತಾಯಿಯ ಬಗ್ಗೆ, ಗಂಡ–ಹೆಂಡರ ಬಗ್ಗೆ ಅಷ್ಟೇ ಪ್ರೀತಿ ವಾತ್ಸಲ್ಯ ಮನೆ ಮಾಡಿದೆ.

**ನಾನು ನನ್ನ ಗೆಳತಿ ಕೂಡಿ ನೀರಿಗೆ ಹೋಗಿ**

**ಕುಲವ ಕೇಳ್ಯಾರ ಬಹುಮಂದಿ ಕೇಳಿದರ**

**ಕುಲವೆರಡು ನಮ್ಮ ಮನವೊಂದು**

ಪ್ರಸ್ತುತ ಸಮಾಜದ ಬಹುದೊಡ್ಡ ಸಮಸ್ಯೆಗಳಲ್ಲಿ ಜಾತಿ ಸಮಸ್ಯೆಯು ಒಂದು. ಆದರೆ ಇದು ಗೆಳೆತನವೆಂಬ ಸಂಬಂಧದಲ್ಲಿ ಯಾವುದೇ ಸ್ಥಾನವನ್ನು ಪಡೆದುಕೊಂಡಿಲ್ಲ. ಗೆಳೆಯ ಗೆಳತಿಯರಿಗೆ ಸ್ನೇಹ ಸಂಬಂಧವೇ ಮುಖ್ಯವಾದಾಗ ಉಳಿದವೆಲ್ಲ ಗೌಣ. ಹಾಗಾಗಿ ಕುಲ ಕುಲವೆಂದು ಒಡೆದಾಡದಿರಿ ಎಂಬ ಕನಕದಾಸರ ಹಾಡು ಇಲ್ಲಿ ಮಾರ್ಧನಿಸಿದಂತಿದೆ.ಕುಲಕ್ಕಿಂತಲೂ ಮಿಗಿಲಾದದ್ದು ಸ್ನೇಹ ಬಾಂದವ್ಯ. ಗೆಳತಿಯರಿಬ್ಬರ ಕುಲವೆರಡಾದರೇನು, ಸಹಜೀವನದಲ್ಲಿ ಕುಲವು ಅಡ್ಡಿಯನ್ನುಂಟು ಮಾಡಲಾರದೆಂಬ ಭಾವವು ಇಲ್ಲಿ ಮೂಡಿ ಬಂದಿವೆ.

**ತಂದೆಯ ನೆನೆದರೆ ತಂಗಳು ಬಿಸಿಯಾಯ್ತು**

**ಗಂಗಾದೇವಿ ನನ್ನ ಹಡೆದವ್ವ ನೆನದರೆ**

**ಮಾಸಿದ ತಲೆಯು ಮಡಿಯಾಯ್ತು.**

ಪ್ರಪಂಚದ ಯಾವುದೇ ಮೂಲೆಗೆ ಹೋದರು ಕನಿಷ್ಠವೆಂದರು ತಂದೆ–ತಾಯಿ–ಮಕ್ಕಳ ಸಂಬಂಧ ಅಂದಿನಿಂದ ಇಂದಿನವರೆಗು ಉಳಿದಿರುವುದು ನಮ್ಮಗಳ ಪುಣ್ಯ. ಮುಂದೊಂದು ದಿನ ಇವೂ ಸಹ

ನಶ್ವರತೆಯತ್ತ ಹೆಜ್ಜೆ ಹಾಕಿದರು ಆಶ್ಚರ್ಯವಿಲ್ಲ.ತಾಯಿ ತಂದೆಯರಸುಪ್ಪತ್ತಿಗೆಯಲ್ಲಿ ಬೆಳೆದ ಹೆಣ್ಣು, ಮದುವೆಯ ನಂತರ ಗಂಡನ ಮನೆಯ ಬೇಗೆಯಲ್ಲಿಜೀವನ ನಡೆಸುವಾಗ ತನ್ನ ತಂದೆಯನ್ನು ನೆನೆಯುತ್ತಾ ಕಷ್ಟಗಳನ್ನು ಮರೆಯುತ್ತಾಳೆ. ಅವನು ತಂಗಳು ತಿಂದರು ಮಗಳಿಗೆ ಬಿಸಿಯೂಟ ನೀಡುತ್ತಿದ್ದನ್ನು ನೆನೆದು, ಮರುಗುತ್ತಾಳೆ ತಂದೇ ಮಗಳ ಸಂಬಂದವು ತಂಗಳನ್ನು ಬಿಸಿಯಾಗಿಡುವ ಭಾವದ ರೀತಿ ರಚನೆಗೊಂಡ ಈ ಗೀತೆ ವಿಶೇಷವಾಗಿದೆ. ತಾಯಿಯನ್ನು ಗಂಗಾದೇವಿಗೆ ಹೋಲಿಸಲಾಗಿದೆ. ಏಕೆಂದರೆ ಅವಳ ವಿಶಾಲವಾದ ಹೃದಯ ಆ ನದಿಯಷ್ಟೆ ವಿಶಾಲವಾಗಿದೆ.ಅವಳನ್ನೆನೆದು ಕಷ್ಟಗಳನ್ನು ಎದುರಿಸಲು ಸಜ್ಜಾಗುತ್ತಾಳೆ. ಮಾನಸಿಕ ವೇದನೆಯನ್ನು ಕಳೆದುಕೊಂಡು ನಿಶ್ಚಿಂತೆಯಾಗುತ್ತಾಳೆ. ಪಾವನಳಾಗುತ್ತಾಳೆ. ಸಂಸಾರವನ್ನು ನಿಭಾಯಿಸಲು ಸಿದ್ಧಳಾಗುತ್ತಾಳೆ.

ಮೇಲೆ ನೀಡಲಾದ ಗೀತೆಗಳೆಲ್ಲವು ಜನಪದರೆ ತಮ್ಮ ಬದುಕಿನ ಅನುಭವಗಳ ಮೂಲಕ ಸೃಷ್ಟಿಸಿದಂತವು. ಅವುಗಳಲ್ಲಿ ಜೀವನದ ಸಾರಸತ್ವವೆ ಮಡುಗಟ್ಟಿ ನಿಂತಿವೆ. ಇವುಗಳಿಂದ ಜನಪದರು ಜೀವನದ ಮೇಲೆ ಕಾಣುವ ಪ್ರೀತಿ, ಭೂತಾಯಿಯ ಮೇಲಿನ ಭಕ್ತಿ, ಗೌರವ, ಮಕ್ಕಳ ಪ್ರೀತಿ, ಸ್ನೇಹ ಸಿಂಚನದ ಮಹತ್ವ, ಬಾಂದವ್ಯಗಳ ಮಹಾಪೂರವನ್ನೇ ಕಾಣಬಹುದು. ಪರಸ್ಪರ ಮಧುರ ಬಂಧಗಳ ಸೊಬಗನ್ನು ಜಾನಪದವು ಒಳಗೊಂಡಿದೆ. ಸಮಾಜದಲ್ಲಿಯೇ ಹುಟ್ಟಿ, ಸಮಾಜದಲ್ಲಿಯೇ ಬೆಳೆದು, ಸಮಾಜಕ್ಕೇ ಕೊಡುಗೆಯನ್ನು, ಜ್ಞಾನವನ್ನು ಪಸರಿಸುವ ನಿಟ್ಟಿನಲ್ಲಿ ಜಾನಪದರು ತಮ್ಮ ಬಂಧ ಸಂಬಂಧಗಳ ಮಧುರತ್ವವನ್ನು ಉನ್ನತ ಮಟ್ಟಕ್ಕೆ ಏರಿಸಿದ್ದಾರೆ.

**ಗ್ರಂಥಋಣ**

1. ಹಂಶಕವಿ : ಜಾನಪದ ದರ್ಶನ, ವಿನಯ ಪ್ರಕಾಶನ ಬೀದರ,2013
2. ಜಾನಪದ ವಿಶ್ವಕೋಶ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,2006
3. ಹಲಸಂಗಿ ಗೆಳೆಯರು : ಗರತಿಯ ಹಾಡು ಕಾವ್ಯಶ್ರಿ ಪ್ರಕಾಶನ, ಮೈಸೂರು.2017
4. ಜಾನಪದ ತತ್ವಗಳು ಮತ್ತು ಸಾಹಿತ್ಯ : ಕರ್ನಾಟಕ ರಾಜ್ಯ ಮುಕ್ತ ವಿ.ವಿ ಮುಕ್ತಗಂಗೋತ್ರಿ, ಮೈಸೂರು.